REGISTER
NO..164/99-2000
DATE 8-3-2000
INITIALS...

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ(ರಿ) ಬೆಂಗಳೂರು ಇವರಿಗೆ ಪ್ಯಾರಾ ಮೆಡಿಕಲ್ ಡಿಪ್ಲೊಮೋ ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

---

ಓದಲಾಗಿದೆ:

ಪೀಠಾಧಿಪತಿಗಳು, ಪ್ಯಾರಾ ಮೆಡಿಕಲ್ ಬೋರ್ಡ್ ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಪತ್ರಸಂಖ್ಯೆ: ಪಿಎಂಬಿ:16:99-2000 ದಿನಾಂಕ: 29-9-99.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 29-9-99ರ ಪತ್ರದಲ್ಲಿ, ಪೀಠಾಧಿಪತಿಗಳು, ಪ್ಯಾರಾ ಮೆಡಿಕಲ್ ಬೋರ್ಡ್ ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರು ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ(ರಿ) ಬೆಂಗಳೂರು ಇವರಿಗೆ 1) ಡಿಪ್ಲೊಮೋ ಇನ್ ಡೆಂಟಲ್ ಮೆಕ್ಯಾನಿಕ್ಸ್ ಕೋರ್ಸ್ – 4 2) ಡಿಪ್ಲೊಮೋ ಇನ್ ಡೆಂಟಲ್ ಹೈಜಿನಿಸ್ಟ್ ಕೋರ್ಸ್ – 4 3) ಡಿಪ್ಲೊಮೋ ಇನ್ ಎಕ್ಸ್-ರೇ ಟೆಕ್ನೀಷಿಯನ್ ಕೋರ್ಸ್ – 10 ಹಾಗೂ 4) ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬೊರೇಟರಿ ಟೆಕ್ನೀಷಿಯನ್ಸ್ ಕೋರ್ಸ್ – 20 ವಿದ್ಯಾರ್ಥಿಗಳ ಪ್ರವೇಶ ಸಾಮರ್ಥ್ಯದೊಂದಿಗೆ 1999-2000ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ. ಈ ಕೋರ್ಸುಗಳನ್ನು ಮಂಜೂರು ಮಾಡುವ ಬಗ್ಗೆ ದಿನಾಂಕ 27-9-99 ರಂದು ನಡೆದ ಪ್ಯಾರಾ ಮೆಡಿಕಲ್ ಬೋರ್ಡಿನ ಸಭೆಯು ನಿರ್ಣಯಿಸಿ ಶಿಫಾರಸು ಮಾಡಿದೆ. ಈ ಮೇಲ್ಕಂಡ ಅಂಶಗಳನ್ನು ಗಮನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 268 ಎಂಎಂಇ 99, ಬೆಂಗಳೂರು, ದಿನಾಂಕ: 26-2-2000

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರವು, ಚಿಲ್ಡ್ರನ್ ಎಜುಕೇಷನ್ ಸೊಸೈಟಿ,(ರಿ), ಬೆಂಗಳೂರು ಇವರಿಗೆ ಈ ಕೆಳಕಂಡ ಪ್ಯಾರಾ ಮೆಡಿಕಲ್ ಡಿಪ್ಲೊಮೋ ಕೋರ್ಸುಗಳನ್ನು ಅವುಗಳ ಮುಂದೆ ನಮೂದಿಸಲಾಗಿರುವ ಪ್ರವೇಶಮಿತಿಯೊಂದಿಗೆ 2000-2001ನೇ ಸಾಲಿನಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳನ್ನು ಪಾಲಿಸಬೇಕೆಂಬ ನಿಬಂಧನೆಗೊಳಪಟ್ಟು ಸರ್ಕಾರವು ಅನುಮತಿ ನೀಡಿದೆ:-

1) ಡಿಪ್ಲೊಮೋ ಇನ್ ಡೆಂಟಲ್ ಮೆಕ್ಯಾನಿಕ್ಸ್ ಕೋರ್ಸ್ – 4 (ನಾಲ್ಕು) ವಿದ್ಯಾರ್ಥಿಗಳು
2) ಡಿಪ್ಲೊಮೋ ಇನ್ ಡೆಂಟಲ್ ಹೈಜಿನಿಸ್ಟ್ ಕೋರ್ಸ್ – 4 (ನಾಲ್ಕು) ವಿದ್ಯಾರ್ಥಿಗಳು
3) ಡಿಪ್ಲೊಮೋ ಇನ್ ಎಕ್ಸ್‌ರೇ ಟೆಕ್ನೀಷಿಯನ್ಸ್ ಕೋರ್ಸ್ – 10(ಹತ್ತು) ವಿದ್ಯಾರ್ಥಿಗಳು
4) ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬೊರೇಟರಿ ಟೆಕ್ನೀಷಿಯನ್ಸ್ ಕೋರ್ಸ್ – 20(ಇಪ್ಪತ್ತು) ವಿದ್ಯಾರ್ಥಿಗಳು

ಷರತ್ತುಗಳು:

(1) ಯಾವುದೇ ಪ್ಯಾರಾಮೆಡಿಕಲ್ ಕೋರ್ಸುಗಳನ್ನು ಪ್ರಾರಂಭ ಮಾಡುವ ಮೊದಲು ಸಂಸ್ಥೆಯು ಸಂಯೋಜನಾ ಶುಲ್ಕದ ರೂಪದಲ್ಲಿ ಪ್ರತಿ ಕೋರ್ಸಿಗೆ ರೂ.20,000.00(ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಹಾಗೂ ಪ್ರತಿ ವರ್ಷ ಸಂಯೋಜನಾ ಶುಲ್ಕವಾಗಿ ರೂ.5,000-00 (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಸಂದಾಯ ಮಾಡತಕ್ಕದ್ದು.

(2) ಸಂಸ್ಥೆಯವರು ಕೋರ್ಸನ್ನು ಪ್ರಾರಂಭ ಮಾಡುವ ಮೊದಲು ಬೋರ್ಡ್ ನಿಗಧಿಪಡಿಸಿದ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸತಕ್ಕದ್ದು.

(3) ಸಂಸ್ಥೆಯವರು ಸದರಿ ಕೋರ್ಸ್‌ಗಳಿಗೆ ಪ್ರವೇಶವನ್ನು ವರ್ಷಕ್ಕೆ ಒಂದು ಬಾರಿ ಜನವರಿ:ಫೆಬ್ರವರಿ ಅಥವಾ ಜೂನ್:ಜುಲೈ ತಿಂಗಳಲ್ಲಿ ಮಾಡಿಕೊಳ್ಳಬಹುದು.

4) ಸದರಿ ಕೋರ್ಸುಗಳಿಗೆ ಪ್ರವೇಶವನ್ನು ಫೆಬ್ರವರಿ ಅಥವಾ ಜುಲೈ ತಿಂಗಳಲ್ಲಿ ಅಂತ್ಯಗೊಳಿಸಿ ಆಯ್ಕೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ಯಾರಾಮೆಡಿಕಲ್ ಬೋರ್ಡಿಗೆ ಪ್ರತಿ ವರ್ಷ ಮಾರ್ಚ್ ಅಥವಾ ಆಗಸ್ಟ್ ತಿಂಗಳಲ್ಲಿ ಸಲ್ಲಿಸತಕ್ಕದ್ದು,

5) ಪ್ಯಾರಾಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೆ ರೂ.200.00 ರಂತೆ ನೋಂದಣಿ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಅವರ ವಿದ್ಯಾರ್ಹತೆಯ ಪ್ರಮಾಣ ಪತ್ರದೊಂದಿಗೆ ಮಂಜೂರಾತಿಗಾಗಿ ಪ್ಯಾರಾಮೆಡಿಕಲ್ ಬೋರ್ಡಿಗೆ ಸಲ್ಲಿಸತಕ್ಕದ್ದು.

6) ಪ್ಯಾರಾಮೆಡಿಕಲ್ ಕೋರ್ಸಿಗೆ ಕನಿಷ್ಠ ವಿದ್ಯಾರ್ಹತೆಯು ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

7) ಪ್ಯಾರಾಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಯಿಂದ ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು.

8) ಸರ್ಕಾರ ಮಂಜೂರಾತಿ ನೀಡಿದ ಪ್ರವೇಶಮಿತಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಪ್ರವೇಶಮಿತಿಗಿಂತ ಹೆಚ್ಚಿನ ಪ್ರವೇಶ ಮಾಡಿಕೊಂಡಲ್ಲಿ ಅದರಿಂದ ಉಂಟಾಗುವ ಅನಾನುಕೂಲ:ಸಮಸ್ಯೆಗಳಿಗೆ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.

9) ಸಂಸ್ಥೆಯವರಿಗೆ ನಿಗದಿಪಡಿಸಿದ ಸೀಟುಗಳಲ್ಲಿ ಶೇ.20ರಷ್ಟನ್ನು ಸರ್ಕಾರದಿಂದ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.

10) ಪ್ಯಾರಾಮೆಡಿಕಲ್ ಬೋರ್ಡ್ ನಿಗದಿಪಡಿಸಿದ ನಿಯಮಾವಳಿಯಂತೆ ಪ್ಯಾರಾಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆಯುವ ಪ್ರತಿ ವಿದ್ಯಾರ್ಥಿಯ ವಯೋಮಿತಿ, ಪಠ್ಯಕ್ರಮ, ಕೋರ್ಸಿನ ಅವಧಿ ಹಾಗೂ ಪರೀಕ್ಷಾ ಕ್ರಮ ಮತ್ತು ಪ್ಯಾರಾಮೆಡಿಕಲ್ ಬೋರ್ಡ್ ನಿಗದಿಪಡಿಸಿದ ಇತರೆ ನಿಯಮಗಳನ್ನು ಸಂಸ್ಥೆಯು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸತಕ್ಕದ್ದು.

11) ಸಂಸ್ಥೆಯು ಸುಸಜ್ಜಿತ ತರಗತಿ ಕೊಠಡಿ, ಪ್ರಯೋಗಶಾಲೆ, ವಾಚನಾಲಯ, ವಿದ್ಯಾರ್ಥಿನಿಲಯ ಹಾಗೂ ಇತರೆ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸತಕ್ಕದ್ದು.

12) ಸದರಿ ಸಂಸ್ಥೆಯು ಹೊಂದಿರುವ ಮೂಲಭೂತ ಸೌಕರ್ಯಗಳ ಬಗ್ಗೆ ವಿದ್ಯಾರ್ಥಿಗಳ ಮೊದಲ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಪ್ಯಾರಾಮೆಡಿಕಲ್ ಬೋರ್ಡ್ ಇಚ್ಛಿಸಿದಲ್ಲಿ ಎರಡನೇ ಬಾರಿಗೆ ಸಂಸ್ಥೆಯನ್ನು ತಪಾಸಣೆ ಮಾಡಬಹುದು;

13) ಸರ್ಕಾರದಿಂದ ಯಾವುದೇ ಆರ್ಥಿಕ ಸೌಲಭ್ಯ ಅಥವಾ ಅನುದಾನವನ್ನು ಸಂಸ್ಥೆಗೆ ನೀಡಲಾಗುವುದಿಲ್ಲ.

14) ಸಂಸ್ಥೆಯನ್ನು ಪ್ಯಾರಾಮೆಡಿಕಲ್ ಬೋರ್ಡಿನಲ್ಲಿ ನೋಂದಣಿ ಮಾಡಿಸತಕ್ಕದ್ದು, ಹಾಗೂ ಪ್ಯಾರಾಮೆಡಿಕಲ್ ಬೋರ್ಡಿನವರು ನಿಗದಿಪಡಿಸಿದ ಮಾದರಿಯನ್ನು ಅನುಸರಿಸತಕ್ಕದ್ದು;

15) ಪ್ಯಾರಾಮೆಡಿಕಲ್ ಕೋರ್ಸಿನ ಅಂತ್ಯದಲ್ಲಿ ಪ್ಯಾರಾಮೆಡಿಕಲ್ ಬೋರ್ಡ್ ನಡೆಸುವ ಪರೀಕ್ಷೆಯನ್ನು ವಿದ್ಯಾರ್ಥಿಗಳು ತೆಗೆದುಕೊಂಡು ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ಪ್ಯಾರಾಮೆಡಿಕಲ್ ಬೋರ್ಡಿನಿಂದ ಪಡೆಯತಕ್ಕದ್ದು;

....3,

16) ಪ್ರತಿ ತಪಾಸಣೆಗೆ ಸಂಸ್ಥೆಯು ರೂ.5000 (ಐದುಸಾವಿರ ರೂಪಾಯಿಗಳು) ಗಳನ್ನು ಪ್ಯಾರಾ ಮೆಡಿಕಲ್ ಬೋರ್ಡಿಗೆ ಪಾವತಿ ಮಾಡತಕ್ಕದ್ದು.

17) ಸರ್ಕಾರದ ಆದೇಶಸಂಖ್ಯೆ: ಆಕುಕ 144 ಎಂಎಂಇ 98 ದಿನಾಂಕ: 30-3-99 ರಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎನ್.ಒ. ಪಾಲೇಕರ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ:

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಬೆಂಗಳೂರು.
3. ಪೀಠಾಧಿಪತಿಗಳು, ಪ್ಯಾರಾ ಮೆಡಿಕಲ್ ಬೋರ್ಡ್, ಆನಂದರಾವ್ ವೃತ್ತ, ಬೆಂಗಳೂರು.
4. ಅಧ್ಯಕ್ಷರು:ಕಾರ್ಯದರ್ಶಿಗಳು, ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ(ರಿ), ಜೆ.ಪಿ.ನಗರ, ಮೊದಲನೇ ಹಂತ, ಬೆಂಗಳೂರು-78.
5. ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
6. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಕಾರ್ಯದರ್ಶಿಗಳು:ಉಪಕಾರ್ಯದರ್ಶಿಗಳು(ವೈಶಿ)ರವರ ಆಪ್ತ ಸಹಾಯಕರು.
8. ವಾರದ ಗೆಜೆಟ್
9. ಶಾಖಾ ರಕ್ಷಕ ಕಡತ: ಹೆಚ್ಚುವರಿ ಪ್ರತಿಗಳು.